

## ಮೊರೇರ ಸ್ಮಾರಕ

ಸುಮಾರು ಸಾವಿರಾರು ವರ್ಷಗಳ ಹಿಂದೆ ಮೊರೇರು ಎಂಬ ಅತಿ ಕುಳ್ಳ ಜನಾಂಗ ಗಂಗಾವತಿ ಸಮೀಪ ಹಿರೇಬೆಣಕಲ್ಲು ಬೆಟ್ಟದ ಮೇಲೆ ವಾಸವಾಗಿತ್ತು. ಈ ಜನಾಂಗದ ವಸತಿ ಪ್ರದೇಶವನ್ನು ಮೊರೇರ ಬೆಟ್ಟವೆಂದು ಕರೆಯಲಾಗುತ್ತದೆ.

ಇತಿಹಾಸ ತಜ್ಞ ಶರಣಬಸಪ್ಪ ಕೋಲ್ಕಾರ್ 'ಮೊರೇರು ಜನಾಂಗದವರು ಮೃತಪಟ್ಟ ಶವವನ್ನು ಹೂಳುತ್ತಿದ್ದ ಸಮಾಧಿಗಳನ್ನು ಹೀಗೆ ಕಟ್ಟುತ್ತಿದ್ದರು' ಎಂದು ಹೇಳುತ್ತಾರೆ. ಬೆಟ್ಟದಲ್ಲಿ 400ಕ್ಕೂ ಹೆಚ್ಚು ಸಮಾಧಿಗಳು ಕಂಡುಬಂದಿದ್ದು ನಾಲ್ಕು ಗೋಡೆಯಾಕಾರದ ಹಾಸುಕಲ್ಲಿನಿಂದ ಚೌಕಾಕಾರದಲ್ಲಿ ನಿರ್ಮಿಸಿ ಮೇಲೆ ಬೃಹದಾಕಾರದ ಕಲ್ಲಿನ ಹಾಸನ್ನು ಹೊದಿಕೆಯಾಗಿ ಬಳಸುತ್ತಿದ್ದರು. ಇದು ಶವ ಸಂಸ್ಕಾರದ ಒಂದು ವಿಧಾನ.

ಸುತ್ತಮುತ್ತ ಬೆಟ್ಟಗಳ ಕಲ್ಲು ಬಂಡಿಗಳ ಮೇಲೆ ನೈಸರ್ಗಿಕವಾಗಿ ದೊರೆವ ಗಿಡಮೂಲಿಕೆ ಹಾಗೂ ಕಾಡು ಹಂದಿಯ ರಕ್ತವನ್ನು ಬಳಸಿ ವರ್ಣಚಿತ್ರಗಳನ್ನು ಬಿಡಿಸುತ್ತಿದ್ದರು ಎನ್ನಲಾಗುತ್ತದೆ.

—ಮೈಲಾರಪ್ಪ ಬೂದಿಹಾಳ ಮುಗಿಲ ಹಕ್ಕಿ



## ಕೆಂಚಿಗನ ಮನೆ

ದಾವಣಗೆರೆಯ ಜೆ. ಹೆಚ್. ಪಟೇಲ್ ಬಡಾವಣೆಯಲ್ಲಿ ವಾಕ್ ಮಾಡುತ್ತಿದ್ದೆ. ಎಲ್ಲೆಲ್ಲಿಯೂ ಹೊಂಗೆ ಮರಗಳ ಹಸಿರು ಮನಸ್ಸಿಗೆ ಹಿತವಾಗಿತ್ತು. ಅದರ ಕೆಳಗೆ ನಡೆದಾಗ ನೆಲದಲ್ಲಿ ಕೆಂಪುಬಣ್ಣದ ಗೊದ್ದಗಳು ಹರಿದಾಡುತ್ತಿದ್ದುದು ಕಂಡಿತು. ತಕ್ಷಣ ಅರಿವಾಯಿತು ಅವು ಕೆಂಜಿಗಗಳು ಅಂತ. ದೂರ ಸರಿದು ನಿಂತು ವೀಕ್ಷಿಸಿದಾಗ ಹೊಂಗೆಯ ಮರದ ತುದಿಯಲ್ಲೊಂದು ಪೊಟ್ಟಣದ ಆಕಾರ ಕಾಣಿಸಿತು. ಅದು ಕೆಂಜಿಗಗಳು ಕಟ್ಟಿಕೊಂಡ ಮನೆ. ಎಲೆಗಳನ್ನು ಸೇರಿಸಿ ಪೊಟ್ಟಣ ಕಟ್ಟಿಟ್ಟಂತಹ ರಚನೆ. ಚಿಕ್ಕವನಾಗಿದ್ದಾಗ ಗೆಳೆಯರು ಅದಕ್ಕೆ ಕಲ್ಲು ಹೊಡೆದು, ಅದರಿಂದ ಕೆಂಜಿಗಗಳು ಉದುರಿ ಮೈ ಮೇಲೆ ಬಿದ್ದು ಕಡಿದ, ಆ ಉರಿ ತಾಳದೆ ಓಡಿದ ನೆನಪಾಯಿತು. ತಮ್ಮನ ಮಗ ಕಲ್ಲು ಹೊಡೆಯಲೆ ಎಂದು ಕೇಳಿದ. ಅವನಿಗೆ ತಿಳಿಹೇಳಿ ಕರೆತಂದದ್ದಾಯಿತು. ಹೊಂಗೆಯ ತಂಪು ಅವುಗಳಿಗೂ ಇಷ್ಟವಾಗಿರಬೇಕು.

—ವೆಂಕಟೇಶ್ ದಾವಣಗೆರೆ

## ಚತುರ ಬೇಟೆಗಾರ ಕಸಾಯಿ

ಆಹಾರವನ್ನು ವಿಲಕ್ಷಣವಾಗಿ ತಿನ್ನುವ ಕ್ರಮವನ್ನು ಈ ಪಕ್ಷಿ ಅನುಸರಿಸಿಕೊಂಡು ಬಂದಿದೆ. ಅದು ತನ್ನ ಬೇಟೆಯಾದ ಹುಳು ಹುಪ್ಪಡಿ, ಮಿಡತೆ, ಇಲಿಗಳನ್ನು ಬೆನ್ನಟ್ಟಿಕೊಂಡು ಹೋಗಿ ಬೇಟೆಯಾಡಿ ತಕ್ಷಣ ತಿನ್ನುವುದಿಲ್ಲ. ಅದನ್ನು ತಾನು ಮೊದಲು ಕುಳಿತ ಸ್ಥಳಕ್ಕೆ ಬಂದು ಗಿಡದ ಕಂಟಿಗಳ ಮುಳ್ಳಿಗೆ ಚುಚ್ಚುತ್ತದೆ. ಮತ್ತೆ ತನಗೆ ಬೇಕಾದಾಗ ಅದನ್ನು ಸೇವಿಸುತ್ತದೆ. ಇದೇ ಕಾರಣ ಇದನ್ನು 'ಬುಚರ್ ಬರ್ಡ್' (ಕಸಾಯಿ ಪಕ್ಷಿ) ಎಂದು ಕರೆಯುವರು. ಇದು ಲ್ಯಾನಿಡೇ ಕುಟುಂಬಕ್ಕೆ ಸೇರಿದೆ. ಜಾತಿ ಲ್ಯಾನಿಯಸ್ ಆಗಿದ್ದೂ, ಕನ್ನಡದಲ್ಲಿ ಕಳಿಂಗ ಪಕ್ಷಿ ಎನ್ನುವರು.

ಇದರ ತಲೆ, ಕತ್ತಿನ ಹಿಂಭಾಗ ಬೂದು, ಎದೆ, ಹೊಟ್ಟೆಯಲ್ಲಿ ಬಿಳಿ ಬಣ್ಣವಿದೆ. ರೆಕ್ಕೆ, ಬಾಲ ಕಪ್ಪು ಬಣ್ಣದಿಂದ ಕೂಡಿದೆ. ಇದು ಧೈರ್ಯವಂತ ಬೇಟೆಗಾರ ಹಕ್ಕಿ. ಗಂಡು ಹೆಣ್ಣಿಗೆ ಇಷ್ಟವಾಗಬಹುದಾದ ಆಹಾರವನ್ನು ಪ್ರೇಮದ ಕಾಣಿಕೆಯಾಗಿ ನೀಡುತ್ತದೆ. ಕಾಣಿಕೆ ನೀಡುವಾಗ ನೃತ್ಯ ಮಾಡುತ್ತ ಹೆಣ್ಣಿನ ಬಳಿ ಸಾಗುತ್ತದೆ. ಗೂಡನ್ನು ಏಪ್ರಿಲ್ ಮೇ ತಿಂಗಳಲ್ಲಿ ಕಟ್ಟುತ್ತದೆ.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು

